ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01**

---

ಸಂಖ್ಯೆ ದೈ.ಶಿ-02ಮುಂ.ಯೋ-1/2011 ದಿನಾಂಕ: 4-05-2011

**ಜ್ಞಾಪನ**

ವಿಷಯ: ಯೋಜನಾ ಲೆಕ್ಕ ಶೀರ್ಷಿಕೆ ಯಲ್ಲಿ ದೈಹಿಕ ಶಿಕ್ಷಣ ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದರುವ ಅನುದಾನ ಬಳಕೆ ಮಾಡುವ ಕುರಿತು

ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ ಯೋ(1) ಮು ಯೋ ಕಾ ಹ ಬಿ 01/11-12 ದಿ;07-04-2011

& & &

2011-12ನೇ ಸಾಲಿಗೆ ಶಿಕ್ಷಣ ಇಲಾಖೆಯ ರಾಜ್ಯ ವಲಯದ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಗೊಳಸಲು ಬಿಡುಗಡೆಯಾದ ಅನುದಾನದ ಕ್ರಿಯಾ ಯೋಜನೆ

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ಬಿಡುಗಡೆಯಾದ ಅನುದಾನ |
|---|---|---|
| 1. | 2202-01-800-1-35-422 ರೂ 280.00 ತಾಲ್ಲೂಕು, ಜಿಲ್ಲಾ, ರಾಜ್ಯ ಹಾಗು ರಾಷ್ಟ್ರೀಯ ಹಂತಗಳ ಕ್ರೀಡಾ ಕೂಟಗಳನ್ನು ಏರ್ಪಡಿಸಲು ಮತ್ತು ಕ್ರೀಡಾ ಸಾಮಗ್ರಿ ಕೊಳ್ಳಲು | ರೂ.280.00 ಲಕ್ಷ |

ಮೇಲಿನ ಅನುದಾನವನ್ನು ಈ ಕೆಳಕಂಡಂತೆ ವಿನಿಯೋಗಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿದೆ. ಲೆಕ್ಕ ಶೀರ್ಷಿಕೆ 2202-01-800-1-35-,422, ರಲ್ಲಿ ಬಿಡುಗಡೆಯಾದ ರೂ.280.00 ಲಕ್ಷ ಅನುದಾನವನ್ನು ಈ ಕೆಳಗಿನಂತೆ ವಿಂಗಡಿಸಿ ವಿನಿಯೋಗಿಸಬಹುದು.

| ಕ್ರ.ಸಂ | ಕಾರ್ಯಕ್ರಮ ವಿವರ | ಅನುದಾನ ವಿಂಗಡಣೆ ರೂ.ಲಕ್ಷಗಳಲ್ಲಿ | ವೆಚ್ಚದ ಅವಧಿ | ಫಲಾನುಭವಿಗಳು (ಕ್ರೀಡಾಪಟುಗಳು) |
|---|---|---|---|---|
| 01 | SGFIಸಂಸ್ಥೆಯಿಂದಆಯೋಜಿಸಲ್ಪಡುವ ರಾಷ್ಟ್ರಮಟ್ಟದ ಕ್ರೀಡಾಕೂಟಗಳನ್ನು ರಾಜ್ಯದಲ್ಲಿ ಆಯೋಜಿಸಲು | 24.00 ಲಕ್ಷ | ನವೆಂಬರ್-11 ರಿಂದ ಫೆಬ್ರವರಿ 12 | 800 ಕ್ರೀಡಾಪಟುಗಳು |
| 02 | ರಾಷ್ಟ್ರಮಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿ ಸಲು ಆಯ್ಕೆಯಾದ ಕ್ರೀಡಾಪಟುಗಳಿಗೆ ತರಬೇತಿ ನೀಡಲು | 9.9 ಲಕ್ಷ | ಅಕ್ಟೋಬರ್-11 ರಿಂದ ಜನವರಿ 12 | 800 ಕ್ರೀಡಾಪಟುಗಳು |
| 03. | 02 ಸಹಿಪ್ರಾಶಾಲೆ ಮತ್ತು 02 ಪ್ರೌಢಶಾಲೆಗೆ ತಲಾ 75 ಸಾವಿರದಂತೆ 34 ಜಿಲ್ಲೆಗಳಿಗೆ | 102.00 ಲಕ್ಷ | ಅಕ್ಟೋಬರ್-11 ರಿಂದ ಜನವರಿ 2012 | 136 ಶಾಲೆಗಳು |
| 04. | 32 ಜಿಲ್ಲೆಯಲ್ಲಿ ಒಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಒಂದು ಸರ್ಕಾರಿ ಪ್ರೌಢ ಶಾಲೆಗೆ ಕ್ರೀಡಾಭಿವೃದ್ಧಿ ಗೊಳಿಸಲು ಹಾಗು ಆ ವಿದ್ಯಾರ್ಥಿಗಳಿಗೆ (ಕ್ರೀಡಾಪಟುಗಳಿಗೆ) ಹೆಚ್ಚಿನ ತರಬೇತಿಗಾಗಿ ಕ್ರೀಡಾಂಗಣ ಅಪೃದ್ಧಿಗಾಗಿ | 32.00 ಲಕ್ಷ | ಅಕ್ಟೋಬರ್-11 ರಿಂದ ಜನವರಿ 12 | 64 ಶಾಲೆಗಳು |

- -2)

| | | | | |
|---|---|---|---|---|
| 05. | ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಲು | 73.10 ಲಕ್ಷ | ಅಕ್ಟೋಬರ್–11 ರಿಂದ ಡಿಸೆಂಬರ್–11 | 21236 ಕ್ರೀಡಾಪಟುಗಳು |
| 06. | ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ಅಗಲಗುರ್ಕಿ ಚಿಕ್ಕಬಳ್ಳಾಪುರ ಕಾಲೇಜಿನ ವಿದ್ಯಾರ್ಥಿ ವಸತಿನಿಲಯಕ್ಕೆ | 27.00ಲಕ್ಷ | ಜುಲೈ–11ರಿಂದ ಅಕ್ಟೋಬರ್–11 | |
| 07. | ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ಅಗಲಗುರ್ಕಿ ಚಿಕ್ಕಬಳ್ಳಾಪುರ ಇಲ್ಲಿ ಕ್ರೀಡಾ ಸಾಮಗ್ರಿ ಖರೀದಿಗಾಗಿ | 02.00ಲಕ್ಷ | ಆಗಸ್ಟ್–11ರಿಂದ ನವೆಂಬರ್–11 | |
| 08. | <u>ಹೊಸ ಕಾರ್ಯಕ್ರಮ</u> ಭಾರತ ಸೇವಾದಳ ಅಭಿವೃದ್ಧಿ ಕಾರ್ಯಗಳಿಗೆ | 10.00 ಲಕ್ಷ | ಜುಲೈ–11ರಿಂದ ಅಕ್ಟೋಬರ್–11 | |
| | ಒಟ್ಟು | 280.00 ಲಕ್ಷ | | |

ನಿರ್ದೇಶಕರು(ಪ್ರಾ.ಶಿ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,
ಸಹನಿರ್ದೇಶಕರು(ದೈ.ಶಿ) ಆಯುಕ್ತರ ಕಛೇರಿ,ಬೆಂಗಳೂರು.
ಪ್ರತಿಯನ್ನು:-
ಉಪನಿರ್ದೇಶಕರು(ಯೋಜನೆ)ಆಯುಕ್ತರಕಛೇರಿ, ಬೆಂಗಳೂರು

**E:\2010-11\MUNDHUVAREDHAYOJANE2011-12.doc**

**ವಿವರಣೆ:**

**ಕ್ರಮ ಸಂಖ್ಯೆ** (1) :- SGFI ಸಂಸ್ಥೆಯು ರಾಜ್ಯಕ್ಕೆ ನೀಡುವ 2 ರಾಷ್ಟ್ರೀಯ ಕ್ರೀಡಾ ಕೂಟಗಳನ್ನು ಸಂಘಟಿಸಲು ಪ್ರತಿ ಕ್ರೀಡಾ ಕೂಟಕ್ಕೆ ರೂ.12.00 ಲಕ್ಷ.ದಂತೆ ಒಟ್ಟು 24.00 ಲಕ್ಷ ಈ ಕ್ರೀಡಾಕೂಟದಲ್ಲಿ ರಾಷ್ಟ್ರದಾದ್ಯಂತ **ಒಟ್ಟಾರೆ 800 ವಿದ್ಯಾರ್ಥಿಗಳು** 5 ದಿನ ಭಾಗವಹಿಸುವ ಈ ಕ್ರೀಡಾಕೂಟವನ್ನು ನಡೆಸಲಾಗುವುದು.

**ಕ್ರಮ ಸಂಖ್ಯೆ (2)** :- SGFI ಸಂಸ್ಥೆಯು ಆಯೋಜಿಸುವ ಕ್ರೀಡಾಕೂಟದಲ್ಲಿ ರಾಜ್ಯವು ಭಾಗವಹಿಸುವ 22 ಕ್ರೀಡಾಕೂಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳಿಗೆ 8 ರಿಂದ 10 ದಿನಗಳ ಸನಿವಾಸ ತರಬೇತಿ ನೀಡಲಾಗುತ್ತಿದ್ದು, ಈ ತರಬೇತಿಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಮತ್ತು ಕ್ರೀಡಾಧಿಕಾರಿಗಳಿಗೆ ಟಿ.ಎ./ಡಿ.ಎ. ಮತ್ತು ತರಬೇತಿ ಸಾಮಗ್ರಿಗಳಗಾಗಿ ರೂ.9.9 ಲಕ್ಷಗಳು **ಒಟ್ಟಾರೆ 800 ವಿದ್ಯಾರ್ಥಿಗಳಿಗೆ** ರಾಜ್ಯದಲ್ಲಿ ತರಬೇತಿ ನೀಡಲಾಗುತ್ತಿದೆ.

**ಕ್ರಮ ಸಂಖ್ಯೆ (3)** :- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎರಡು ಪ್ರೌಢ ಶಾಲೆ, ಎರಡು ಸರ್ಕಾರಿ ಪ್ರಾಥಮಿಕ ಶಾಲೆಯನ್ನು ಗುರುತಿಸಿ ಆ ಶಾಲೆಗೆ ಬೇಕಾದ ಕ್ರೀಡಾ ಸಾಮಗ್ರಿ ಖರೀದಿ ಮಾಡಲು ಅನುದಾನವನ್ನು ಸರ್ಕಾರಿ ಪ್ರೌಢ ಶಾಲೆಗೆ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗೆ ತಲಾ ರೂ..75.00 ಸಾವಿರದಂತೆ ಪ್ರತಿ ಜಿಲ್ಲೆಗೆ ರೂ.3.00 ಲಕ್ಷದಂತೆ ಬಿಡುಗಡೆ ಮಾಡಬಹುದು. ಒಟ್ಟು 102.00 ಲಕ್ಷ ಈ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಶಾಲೆಯಲ್ಲಿ ಆಟದ ಮೈದಾನ ಇದ್ದು ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವುದು ಅವಶ್ಯಕವಾಗಿದೆ. ಹಾಗು ಸದರಿ ಶಾಲೆಯು ಈ ಹಿಂದೆ ಜಿಲ್ಲಾ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಪ್ರಥಮ ಅಥವಾ ದ್ವಿತೀಯ ಸ್ಥಾನವನ್ನು ಯಾವುದಾದರೂ 2 ಕ್ರೀಡೆಗಳಲ್ಲಿ ಪಡೆದಿರುವುದು ಕಡ್ಡಾಯವಾಗಿರುತ್ತದೆ. **ಇದರಿಂದ ರಾಜ್ಯದಲ್ಲಿ ಒಟ್ಟಾರೆ 136 ಶಾಲೆಗಳು** ಫಲಾನುಭವಿ ಗಳಾಗಿರುತ್ತಾರೆ

**ಕ್ರಮ ಸಂಖ್ಯೆ (4)** : ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ (ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ ಹೊರತು ಪಡಿಸಿ) ಒಂದು ಸರ್ಕಾರಿ ಪ್ರೌಢ ಶಾಲೆ, ಒಂದು ಸರ್ಕಾರಿ ಪ್ರಾಥಮಿಕ ಶಾಲೆಯನ್ನು ಗುರುತಿಸಿ ಆ ಶಾಲೆಯ ಕ್ರೀಡಾಂಗಣ ಅಭಿವೃದ್ಧಿಗೊಳಸಲು ಅನುದಾನವನ್ನು ಪ್ರೌಢ, ಪ್ರಾಥಮಿಕ ಶಾಲೆಗೆ ತಲಾ ರೂ. 50 ಸಾವಿರದಂತೆ ಪ್ರತಿ ಜಿಲ್ಲೆಗೆ ರೂ.01.00 ಲಕ್ಷದಂತೆ ಬಿಡುಗಡೆ ಮಾಡಬಹುದು..ಒಟ್ಟು 32 ಲಕ್ಷ ಈ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಶಾಲೆಯಲ್ಲಿ ಆಟದ ಮೈದಾನ ಇದ್ದು ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವುದು ಅವಶ್ಯಕವಾಗಿದೆ. ಹಾಗು ಸದರಿ ಶಾಲೆಯು ಈ ಹಿಂದೆ ಜಿಲ್ಲಾ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಪ್ರಥಮ ಅಥವಾ ದ್ವಿತೀಯ ಸ್ಥಾನ ಯಾವುದಾದರೂ 2 ಕ್ರೀಡೆಗಳಲ್ಲಿ ಪಡೆದಿರುವುದು ಕಡ್ಡಾಯವಾಗಿರುತ್ತದೆ. **ಇದರಿಂದ ರಾಜ್ಯದಲ್ಲಿ ಒಟ್ಟಾರೆ 64 ಶಾಲೆಗಳು** ಫಲಾನುಭವಿ ಗಳಾಗಿರುತ್ತಾರೆ.

**ಕ್ರಮ ಸಂಖ್ಯೆ (5)**:- ಇಲಾಖೆಯಿಂದ ಆಯೋಜಿಸುವ ಕ್ರೀಡೆಗಳಲ್ಲಿ ಶಾಲಾ ಮಟ್ಟದಿಂದ ಜಿಲ್ಲಾ ಮಟ್ಟದವರೆಗೂ ಬಂದು ಜಿಲ್ಲಾ ಮಟ್ಟದಲ್ಲಿ ವಿಜೇತರಾಗುವ ಕ್ರೀಡಾ ಪಟುಗಳಿಗೆ ಪ್ರೋತ್ಸಾಹ ಧನ ನೀಡಿ ಮಕ್ಕಳು ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿಯಿಂದ ಭಾಗವಹಿಸಲು ಉತ್ತೇಜನ ನೀಡುವ ಸಲುವಾಗಿ ಈ ಕೆಳಕಂಡ ಕ್ರೀಡೆಗಳಲ್ಲಿ ವಿಜೇತರಾಗುವ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಲು ಉದ್ದೇಶಿಸಲಾಗಿದೆ.

ಮೇಲಾಟ ಕ್ರೀಡೆಗಳಲ್ಲಿ ವಿಜೇತರಾಗುವ ಪ್ರಥಮ, ದ್ವಿತೀಯ ಮತ್ತು ತೃತೀಯ ಕ್ರೀಡಾಪಟುಗಳಗೆ ಕ್ರಮವಾಗಿ ರೂ..300/-, ರೂ.250/- ಹಾಗು ರೂ.200/- ಗಳಂತೆ ಹಾಗು ದೇಶೀಯ ಆಟಗಳಾದ ಕಬಡ್ಡಿ ಮತ್ತು ಖೋ ಖೋ ಕ್ರೀಡೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳಗೆ ಕ್ರಮವಾಗಿ ರೂ.300/-, ರೂ.250/- ರಂತೆ ನಗದು ಬಹುಮಾನವನ್ನು ಹಾಗು ಒಂದು ಪ್ರಶಸ್ತಿ ಪತ್ರ ನೀಡಲು ಒಟ್ಟಾರೆ 34 ಜಿಲ್ಲೆಗೆ 73.10 ಲಕ್ಷ ವೆಚ್ಚವಾಗಲಿದ್ದು **ಒಟ್ಟಾರೆ 21236 ಕ್ರೀಡಾಪಟುಗಳು** ಇದರಿಂದ ಫಲಾನುಭವಿಗಳಾಗುತ್ತಾರೆ

**ಕ್ರಮ ಸಂಖ್ಯೆ** (6):- ಚಿಕ್ಕಬಳ್ಳಾಪುರ ಜಿಲ್ಲೆಯ ಅಗಲಗುರ್ಕಿ ಗ್ರಾಮದಲ್ಲಿ ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ರಾಜ್ಯದಲ್ಲೇ ಒಂದೇ ಒಂದು ಇದ್ದು ಈ ಕಾಲೇಜು ಸ್ವಂತ ಕಟ್ಟಡವನ್ನು ಹೊಂದಿರುತ್ತದೆ ಈ ಶಿಕ್ಷಣವು ಸನಿವಾಸ ಶಿಕ್ಷಣವಾಗಿದ್ದು ವಿದ್ಯಾರ್ಥಿ ನಿಲಯ ಇಲ್ಲದೆ ಇರುವುದರಿಂದ ವಿಧ್ಯಾರ್ಥಿಗಳು ಬಹಳ ತೊಂದರೆಪಡುತ್ತಿದ್ದಾರೆ ಅದ್ದರಿಂದ ವಸತಿ ನಿಲಯ ಕಟ್ಟದ ನಿರ್ಮಾಣ ಮಾಡುವ ಸಲುವಾಗಿ. ರೂ.27.00 ಲಕ್ಷ

**ಕ್ರಮ ಸಂಖ್ಯೆ** (7):- ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ಅಗಲಗುರ್ಕಿ ಚಿಕ್ಕಬಳ್ಳಾಪುರ ಇಲ್ಲಿ ವಿದ್ಯಾರ್ಥಿಗಳಗೆ ದಿನ ನಿತ್ಯದ ತರಬೇತಿ ನೀಡಲು ಕ್ರೀಡಾ ಸಾಮಗ್ರಿ ಖರೀದಿ ಮಾಡಲು ರೂ 2.00 ಲಕ್ಷ

**ಹೊಸ ಕಾರ್ಯಕ್ರಮ**

**ಕ್ರಮ ಸಂಖ್ಯೆ:** (8):- ಪ್ರಸಕ್ತ ಸಾಲಿನಲ್ಲಿ ಭಾರತ ಸೇವಾದಳ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡಲು ಸರ್ಕಾರ ಸೂಚಿಸಿದ್ದು ಸದರಿ ಸಂಸ್ಥೆಯ ಪ್ರಸ್ತಾವನೆ ಮೇರೆಗೆ ಭಾರತ ಸೇವಾದಳದ ಅಭಿವೃದ್ಧಿ ಕಾರ್ಯಕ್ರಮಕ್ಕೆ ರೂ.10.00 ಲಕ್ಷ ಅನುದಾನ

ಮೇಲಿನಂತೆ ಮರುಹಂಚಿಕೆ ಮಾಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೂಳಸಲು ಅನುಮತಿ ನೀಡಿದೆ.

**ನಿರ್ದೇಶಕರು (ದೈ.ಶಿ)**
**ಸಾ.ಶಿ.ಇಲಾಖೆ, ಬೆಂಗಳೂರು**

**ಗೆ,**
**ಸಹನಿರ್ದೇಶಕರು(ದೈ.ಶಿ) ಆಯುಕ್ತರ ಕಛೇರಿ,ಬೆಂಗಳೂರು.**
**ಪ್ರತಿಯನ್ನು:-**
**ಉಪನಿರ್ದೇಶಕರು(ಯೋಜನೆ)ಆಯುಕ್ತರಕಛೇರಿ, ಬೆಂಗಳೂರು**
D:\Su\ಮುಂ.ಯೋ.ಅನು.ಬಿ.ಅನುದಾನ.doc